# ಜನರ ನಡುವಿನಿಂದ ಜನರಿಗಾಗಿ...





ಜನ ಓದಲೆಂದು ಅಥವಾ ಜನ ಮೆಚ್ಚಲೆಂದು ಬರೆಯುವುದು ಇರಲಿ, 'ಜನ ಬದುಕಲೆಂದು' ಕಾವ್ಯ ಬರೆದ ಪರಂಪರೆ ನಮ್ಮದು. ಅಕ್ಷರಸ್ಥರ ಸಂಖ್ಯೆ ಅತ್ಯಂತ ಕಡಿಮೆ ಇದ್ದ ಮತ್ತು ಅಕ್ಷರ ರೂಪವನ್ನು ಪ್ರಸಾರ ಮಾಡುವ ವಿಧಾನಕ್ಕೆ ಮಿತಿ ಇದ್ದ ಕಾಲದಲ್ಲಿ ಕೂಡ ಬರೆದದ್ದನ್ನು ಹೇಗೋ ಹೆಚ್ಚು ಜನರಿಗೆ ಮುಟ್ಟಿಸಬೇಕೆಂಬ ತವಕ ನಮ್ಮ ಕವಿಗಳಿಗಿತ್ತು. 'ನಾನು ಹೊಸ ಮಾಲೆಯನ್ನೇನೋ ಕಟ್ಟಿದ್ದೇನೆ, ಮುಡಿವ ಭೋಗಿಗಳು ಇಲ್ಲದಿದ್ದರೆ ಬಾಡಿ ಹೋಗುವುದಿಲ್ಲವೇ' ಎಂಬ ಕಳವಳ ಅಂದಿನಿಂದ ಇಂದಿನವರೆಗೆ ಇರುವುದೇ! ಹಾಗಿದ್ದ ಮೇಲೆ ಒಂದು ಕವಿತೆಯನ್ನು ಹೆಚ್ಚು ಜನ ಹಾಡಿಕೊಳ್ಳುವುದು, ಒಂದು ಕಥೆ ಅಥವಾ ಕಾದಂಬರಿಯನ್ನು ಹೆಚ್ಚು ಜನ ಓದುವುದು ಅದಕ್ಕೆ ಸಂದ ಮನ್ನಣೆಯಲ್ಲದೆ ಮತ್ತೇನು? ಸಾಹಿತ್ಯ ಯಾವತ್ತೂ ಸಮುದಾಯ ಎತ್ತಿ ಆಡಿಸಬೇಕಾದ ಕೈಕೂಸು.

ಜನಪ್ರಿಯ ಸಾಹಿತ್ಯದ ಬಗ್ಗೆ 'ಜನಪ್ರಿಯವಲ್ಲದ' ವ್ಯಾಖ್ಯೆಗಳು ಏನಾದರೂ ಇರಲಿ, ನಿತ್ಯದ ಬದುಕಿನಲ್ಲಿ ಅದನ್ನು ಮರೆಯುವ ಗಳಿಗೆಗಳನ್ನು ಒದಗಿಸುವ 'ಓದು' ಅಷ್ಟರ ಮಟ್ಟಿಗೆ ಸಾರ್ಥಕ. ಸಾಹಿತ್ಯ ಜನರಿಗೆ ಏನನ್ನಾದರೂ ಕೊಡಲಿ, ಎಷ್ಟು ಸ್ವಲ್ಪವನ್ನಾದರೂ ಕೊಡಲಿ ಅದು ಎಲ್ಲರಿಗೆ ತಲುಪಲಿ ಎನ್ನುವುದೇ ಮುಖ್ಯ ಆಶಯ. ಇಷ್ಟಕ್ಕೂ ಜನಪ್ರಿಯ ಸಾಹಿತ್ಯವೂ ಜನರನ್ನು ಕುರಿತೇ ಬರೆದದ್ದು. ರಂಜನೆ ಇದ್ದ ಮಾತ್ರಕ್ಕೆ ಚಿಂತನೆ ಹುಟ್ಟುವುದಿಲ್ಲ ಎಂದೇಕೆ ಭಾವಿಸಬೇಕು? ಶ್ರೇಷ್ಠತೆ ಯಾವ ಕಾಲದಲ್ಲೂ ಎಲ್ಲ ಜನರ ವ್ಯಸನವಲ್ಲ.

'ಜನಪ್ರಿಯ ಸಾಹಿತ್ಯ' ಕುರಿತು ಅದನ್ನು ನಿರ್ಮಿಸುವವರೇ ವಿವೇಚಿಸಿ, 'ಬರೆಯುವವರು ಏನು ಬರೆಯುತ್ತಾರೆ ಎನ್ನುವುದೇ ಮುಖ್ಯ, ಈ ಸಾಹಿತ್ಯವೇ ಜನಪರ' ಎಂಬಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವುದು ನಿಮ್ಮ ನೆಚ್ಚಿನ 'ಮಯೂರ'ದ ಈ ಹೊಸ ವರ್ಷದ ಸಂಚಿಕೆಯ ವಿಶೇಷ. ಈ ಚರ್ಚೆಯಲ್ಲದೆ, ಜನರು ಮನೆಮನೆಗಳಲ್ಲಿ ಆರಾಧಿಸಿದ ಚಿತ್ರಕಲೆ ಕುರಿತು ಲೇಖನಮಾಲೆಯೂ ಆರಂಭವಾಗಿದೆ. ಇನ್ನು 'ನವಿಲುಗರಿ' ಯಲ್ಲಿ ಜನಪ್ರಿಯ ಸಾಹಿತಿಯ ನೆನಪು ಇರುವುದಂತೂ ಸಹಜವೇ.

ಜನರ ಕೈಗೆ ಕನ್ನಡ ಪತ್ರಿಕೆ ಮತ್ತು ಪುಸ್ತಕ ತಲುಪಿಸಿದ ಜನಪ್ರಿಯ ಸಾಹಿತಿಗಳ ಪ್ರತಿನಿಧಿ ಎಂದೇ ಹೇಳಬಹುದಾದ ನಾ. ಡಿಸೋಜ ಅವರು 80 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಸಾಹಿತ್ಯವನ್ನು ಜನಪ್ರಿಯ ಮಾಡುವ ಜವಾಬ್ದಾರಿಯನ್ನು ಪ್ರೀತಿಯಿಂದ ನಿರ್ವಹಿಸುತ್ತಿರುವ 'ಮಯೂರ' ಅವರಿಗೆ ಅಭಿನಂದನೆ ಸಲ್ಲಿಸುತ್ತದೆ.

**–ಆರ್. ಪೂರ್ಣಿಮಾ**